ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ .....

..... ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
1)	"Improvement Restoration to roads and drains at Dasarahalli, Saraipalya and Rechenahalli surrounding areas in Ward No:06 ಎಂಬ ಕಾಮಗಾರಿಗೆ ಸಂಬಂಧಿಸಿದಂತೆ ದಿನಾಂಕ:24-11-2020ರಂದು ಕಾರ್ಯಾದೇಶ ನೀಡಲಾಗಿರುತ್ತದೆ. ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು 14 ತಿಂಗಳ ಕಾಲವಕಾಶ ನಿಗಧಿಪಡಿಸಿದ್ದು, ದಿನಾಂಕ:24-01-2022ಕ್ಕೆ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ. ಅದರೆ ಕಾಮಗಾರಿಯು ನಿರ್ವಹಿಸುವ ಸಮಯದಲ್ಲಿ BWSSB ಇಲಾಖೆಯಿಂದ ಕಾವೇರಿ ಕುಡಿಯುವ ನೀರಿನ ಹಾಗೂ ಒಳಚರಂಡಿ ಪೈಪ್ ಲೈನ್ ಅಳವಡಿಸುವ ಕಾಮಗಾರಿಯು ಪ್ರಗತಿಯಲ್ಲಿದ್ದು, ವಾರ್ಡಿನ ಬಹುತೇಕ ಬಡಾವಣೆಗಳ ರಸ್ತೆಗಳಲ್ಲಿ ಪೈಪ್ ಲೈನ್ ಅಳವಡಿಸುವ ಕಾಮಗಾರಿಯು ಪೂರ್ಣಗೊಂಡಿರುವುದಿಲ್ಲ. ಹಾಗೂ ಕೋವಿಡ್ ಸಂಬಂಧ ಲಾಕ್‌ಡೌನ್‌ನಿಂದ ಕೂಲಿ ಕಾರ್ಮಿಕರ ಲಭ್ಯತೆಯ ತೊಂದರೆ ಹಾಗೂ ನಗರದಲ್ಲಿ ನಿರಂತರವಾಗಿ ಮಳೆಯಾಗುತ್ತಿರುವುದರಿಂದ ಸಕಾಲದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕಷ್ಟ ಸಾಧ್ಯವಾಗಿರುತ್ತದೆ. ಮುಂದುವರೆದು, ಪ್ರಸ್ತುತ ಸದರಿ ಕಾಮಗಾರಿಯನ್ನು ಶೇ.85% ರಷ್ಟು ಪೂರ್ಣಗೊಂಡಿದ್ದು, ಉಳಿದ ಶೇ.15% ರಷ್ಟು ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಮೇಲಿನ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಸದರಿ ಕಾಮಗಾರಿಗೆ ದಿನಾಂಕ:24-11-2020 ರಿಂದ ದಿನಾಂಕ:24-01-2022ರವರೆಗೆ ಕಾಲಾವಧಿಯನ್ನು ಈಗಾಗಲೇ ಪಡೆದಿದ್ದು, ಸದರಿ ಕಾಲವಧಿಯಲ್ಲಿ ಕಾಮಗಾರಿಯು ಪೂರ್ಣಗೊಂಡಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಗೆ ದಿನಾಂಕ:29-09-2022 ರವರೆಗೆ ದಂಡ ರಹಿತವಾಗಿ ಕಾಲಾವಧಿಯನ್ನು ವಿಸ್ತರಿಸಲು ಕೋರಿ ಕಡತವನ್ನು ಮಂಡಿಸಿದೆ. ಸ.ಅ ಸ.ಕಾ.ಅ.ಅ Asst. Executive Engineer Project Division Yelahanka Zone BBMP, Bangalore - 92 Executive Engineer Project Division Yelahanka Zone BBMP, Bangalore-92 E.E (projects) ~~ಕಾರ್ಯಪಾಲಕ ಅಭಿಯಂತರರು (ಯೋಜನೆ)~~
2)	
3)	ಕಂಡಿಕೆ (1) ಹಾಗೂ (2)ರಲ್ಲಿ ವಿವರಿಸಿರುವಂತೆ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು 14 ತಿಂಗಳ ನಿಗದಿತ ಅವಧಿಯನ್ನು ನೀಡಲಾಗಿದ್ದು, ಸದರಿ ಸಮಯದಲ್ಲಿ Covid-19 ರ lockdown ಗಳಿಂದ ಕೆಲಸಗಾರ ಲಭ್ಯತೆಯ ತೊಂದರೆಯಲ್ಲಿ ಹಾಗೂ ನಿರಂತರ ಮಳೆಯಿಂದ ಕಾಮಗಾರಿಯ pipe line ಪು.ತಿ.ನೋ

Scanned by TapScanner

ಯ :

ಪುಟದ ಸಂಖ್ಯೆ .....

ಕಡತದ ಸಂಖ್ಯೆ .....

ಡಿಕೆ ಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಗುತ್ತಿಗೆದಾರರು ಕಾಮಗಾರಿಯ ಪ್ರಗತಿಯಲ್ಲಿ ಇರುವಾಗ ಅಥವಾ ಕಾಮಗಾರಿಯ ಪೂರ್ಣಗೊಂಡ ನಂತರ ಯಾವುದಾದರೂ ಸಮಯದಲ್ಲಿ ಕಾಮಗಾರಿಯ ಪ್ರಗತಿಯ ಬಗ್ಗೆ ಪರಿಶೀಲನೆ ಮಾಡಲು ಅಧಿಕಾರಿಗಳು ಭೇಟಿ ನೀಡಿದಾಗ ಅಥವಾ ಕಾಮಗಾರಿಯ ಗುಣಮಟ್ಟದ ಬಗ್ಗೆ ಯಾವುದೇ ಸಂಶಯ ಬಂದಲ್ಲಿ ಅಥವಾ ಕಾಮಗಾರಿಯ ಗುಣಮಟ್ಟದ ಬಗ್ಗೆ ಯಾವುದೇ ದೂರು ಬಂದಲ್ಲಿ ಅಂತಹ ಸಂದರ್ಭದಲ್ಲಿ ಕಾಮಗಾರಿಯ ಗುಣಮಟ್ಟವನ್ನು ಪರೀಕ್ಷಿಸಲು ಗುತ್ತಿಗೆದಾರರು ಯಾವುದೇ ಆಕ್ಷೇಪಣೆ ಇಲ್ಲದೆ ಸಹಕರಿಸಬೇಕು. ಒಂದು ವೇಳೆ ಗುತ್ತಿಗೆದಾರರು ಸಹಕರಿಸದೇ ಇದ್ದಲ್ಲಿ ಅಂತಹ ಸಂದರ್ಭದಲ್ಲಿ ಕಾಮಗಾರಿಯ ಗುಣಮಟ್ಟವನ್ನು ಪರೀಕ್ಷಿಸಲು ಕಾಮಗಾರಿಯ ಒಟ್ಟು ಮೊತ್ತದ ಶೇ.1 ರಷ್ಟು ಮೊತ್ತವನ್ನು ಗುತ್ತಿಗೆದಾರರಿಂದ ವಸೂಲಿ ಮಾಡಲಾಗುವುದು. (ಶೇ.1)

Executive Engineer
Project Divlsion
Yelahanka Zone
BBMP, Bangalore-92

ಸಹಾಯಕ ಅಭಿಯಂತರರು
ಕಾರ್ಯ ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned by TapScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ .....

..... ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಸಲ್ಲಿಸಿದೆ,

ವಿಷಯ: **Improvements, Restoration to Roads and Drains at Dasaraahlli Saraipalya Surrounding Area in ward No. 06** ಕಾಮಗಾರಿಯ **Time Extension** ಅವಧಿಯನ್ನು ಅನುಮೋದಿಸುವ ಬಗ್ಗೆ.

ಉಲ್ಲೇಖ: ಕಾರ್ಯಪಾಲಕ ಅಭಿಯಂತರರು, ಬ್ಯಾ.ವಿ ರವರ ಕಛೇರಿ ಕಾರ್ಯದೇಶ ಸಂಖ್ಯೆ **EE(Project)/Ynk Zone/WO/143/20-21 Date. 24.11.2020**

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಸದರಿ ಕಾಮಗಾರಿಗೆ ಉಲ್ಲೇಖಿತ ಕಾರ್ಯದೇಶದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು 14 ತಿಂಗಳುಗಳ ಅವಧಿ ನಿಗಧಿಪಡಿಸಲಾಗಿತ್ತು, ಗುತ್ತಿಗೆದಾರರು ಈ ಅವಧಿಯಲ್ಲಿ ಶೇ. 90% ರಷ್ಟು ಕಾಮಗಾರಿ ಪೂರ್ಣಗೊಳಿಸಿದ್ದರೂ, ತದನಂತರ ವಾರ್ಡ್ ನಂ. 05 ಹಾಗೂ 06ರಲ್ಲಿ ಬರುವ 110 ಹಳ್ಳಿಗಳಲ್ಲಿ ಹೊಸದಾಗಿ ಕಾವೇರಿ ಕುಡಿಯುವ ನೀರಿನ ಹಾಗೂ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಕಾಮಗಾರಿ ಪ್ರಾರಂಭಿಸಿದ್ದರಿಂದ ಸ್ಥಳೀಯ ಶಾಸಕರು ಕಾವೇರಿ ಕುಡಿಯುವ ನೀರಿನ ಹಾಗೂ ಒಳಚರಂಡಿ ಪೈಪ್‌ಲೈನ್ ಅಳವಡಿಸುವ ಕಾಮಗಾರಿ ಪೂರ್ಣಗೊಳಿಸುವವರೆಗೆ ಸದರಿ ಕಾಮಗಾರಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವಂತೆ ಸೂಚಿಸಿರುವಂತೆ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿರುತ್ತದೆ.

ತದನಂತರ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ವತಿಯಿಂದ ಪೈಪ್‌ಲೈನ್ ಅಳವಡಿಸುವ ಕಾಮಗಾರಿಯನ್ನು ಹಾಗೂ ಟೆಸ್ಟಿಂಗ್ ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ ಗುತ್ತಿಗೆದಾರು ಉಳಿದ ಶೇ. 10% ರಷ್ಟು ಕಾಮಗಾರಿಯನ್ನು ಕೈಗೊಂಡು ದಿನಾಂಕ: 15.05.2023 ರಂದು ಪೂರ್ಣಗೊಳಿಸಿರುತ್ತಾರೆ.

ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಈ ಹಿಂದೆ ನೀಡಿರುವ Time Extension ಅವಧಿ ದಿನಾಂಕ: 29.09.2022 ರಂದು ಮುಕ್ತಾಯಗೊಂಡು ಕಾಮಗಾರಿಯ ಪೂರ್ಣಗೊಳ್ಳುವವರೆವಿಗೂ ಒಟ್ಟು 228 ದಿನಗಳು ವಿಳಂಭವಾಗಿದ್ದು, ಸದರಿ ಕಾಮಗಾರಿಯನ್ನು ನಿಗಧಿತ ಸಮಯದಲ್ಲಿ ಪೂರ್ಣಗೊಳಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ವತಿಯಿಂದ ಪೈಪ್‌ಲೈನ್ ಅಳವಡಿಸುವ ಕಾಮಗಾರಿಯು ಪೂರ್ಣಗೊಳ್ಳದೇ ಇರುವುದರಿಂದ ವಿಳಂಭವಾಗಿರುವುದಾಗಿ ಪರಿಗಣಿಸಿ ಈ ಅವಧಿಗೆ ಗುತ್ತಿಗೆದಾರರಿಗೆ ಯಾವುದೇ ದಂಡ ವಿಧಿಸದೇ Time Extension ಅನುಮೋದಿಸಬಹುದಾಗಿದ್ದು ತಮ್ಮ ಮುಂದಿನ ಆದೇಶ ಕೋರಿ ಕಡತ ಮಂಡಿಸಿದೆ.

ಸಹಾಯಕ ಅಭಿಯಂತರರು

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು
Asst. Executive Engineer
ಯೋಜನಾ ವಿಭಾಗ, ಯಲಹಂಕ
Yelahanka Zone
BBMP, Bangalore - 92

ಕಾ.ಪಾ.ಅ (ಯೋ.ವಿ)

ಸಂಖ್ಯೆ (05) ಮತ್ತು (06) ರಲ್ಲಿ ವಿವರಿಸಿರುವಂತೆ ಸದರಿ ಕಾಮಗಾರಿಯ ಅವಧಿಗಳು ದಿನಾಂಕ 22-09-2022 ರವರೆಗೆ ಮುಂದುವರೆಸಲು ಅನುಮೋದನೆ ನೀಡಿದ್ದು, ನಿಯಮಾನುಸಾರ ಕ್ರಮ ಕೈಗೊಳ್ಳಲು

Scanned by TapScanner

ವಿಷಯ :

ಪುಟದ ಸಂಖ್ಯೆ .....

ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
(*)	ಶೆ 90% ಕಿಂತ ಕಡಿಮೆ ಇರುವಂತೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು ಇಲ್ಲಿ ಕಾಮಗಾರಿಯ ಪ್ರಾರಂಭದಲ್ಲಿ ಮಾಡಿರುವ Test strip ಗಳಲ್ಲಿ ಸಹ Asphalt ಪ್ರಮಾಣವು ಕಡಿಮೆ ಬಂದಿರುವುದು ಕಂಡುಬಂದಿರುತ್ತದೆ. ಆದ್ದರಿಂದ ಕಾಮಗಾರಿಯನ್ನು ಸಂಪೂರ್ಣವಾಗಿ ತಿರಸ್ಕರಿಸಲಾಗಿದೆ. ಮುಂದಿನ ಕಾಮಗಾರಿಗಳಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಕೋರಿದೆ. ಈ ಬಿಲ್ಲಿನಲ್ಲಿ ಶೇ 25% ಸಂಖ್ಯೆ ಮೊತ್ತ ರೂ EOT ಗುತ್ತಿಗೆದಾರರಿಗೆ ಪಾವತಿಸಲು ಶಿಫಾರಸ್ಸು ಮಾಡಿದೆ. E:E (yelahanka) ಕಾರ್ಯಪಾಲಕ ಅಭಿಯಂತರರು (ಪ್ರ-1)

ಸಹಿ/-
ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

25/05/2023

Scanned by TapScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ .....

..... ಕಡತದ ಸಂಖ್ಯೆ .....

ಸಂಚಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಸಲ್ಲಿಸಿದೆ,

ವಿಷಯ: ಬ್ಯಾಟರಾಯನಪುರ ಉಪವಿಭಾಗ ವ್ಯಾಪ್ತಿಯಲ್ಲಿ **Improvements, Restoration to Roads and Drains at Dasaraahlli Saraipalya Surrounding Area in ward No. 06** ಕಾಮಗಾರಿಯ Modified Estimate, Work Slip, Comparitive Statement ಗೆ ಅನುಮೋದನೆ ನೀಡುವ ಕುರಿತು.

ಉಲ್ಲೇಖ:

1. ಕಾರ್ಯಪಾಲಕ ಅಭಿಯಂತರರು, ಬ್ಯಾ.ವಿ ರವರ ಕಛೇರಿ ಕಾರ್ಯಾದೇಶ ಸಂಖ್ಯೆ. **EE(Project)/Ynk Zone/WO/143/20-21 Date. 24.11.2020**
2. ಮಾನ್ಯ ಮುಖ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಸುತ್ತೋಲೆ ಪತ್ರ ಸಂಖ್ಯೆ. ಮುಲೆಆ/ಪಿ.ಆರ್/ಜಿ.ಎಸ್.ಟಿ-01/2022-23, ದಿ. 26.12.2022

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬ್ಯಾಟರಾಯನಪುರ ಉಪ ವಿಭಾಗ ವ್ಯಾಪ್ತಿಯಲ್ಲಿ **Improvements, Restoration to Roads and Drains at Dasaraahlli Saraipalya Surrounding Area in ward No. 06** ಕಾಮಗಾರಿಯು ರೂ. 1500.00 ಲಕ್ಷಗಳಿಗೆ 2020-21ನೇ ಸಾಲಿನ ಆಯವ್ಯಯದ ಶುಭ್ರ ಬೆಂಗಳೂರು ಅನುದಾನದ ಲೆಕ್ಕ ಶಿರ್ಷಿಕೆ P-3761 ಅನುದಾನದಡಿಯಲ್ಲಿ ಅನುಮೋದನೆಗೊಂಡಿದ್ದು, ಕಾಮಗಾರಿ ಸಂಕೇತ ಕಾಮಗಾರಿ ಸಂಕೇತ: 006-20-000179 ರಂತೆ ಅನುಮೋದನೆಯಾಗಿರುತ್ತದೆ. ಸದರಿ ಕಾಮಗಾರಿಯನ್ನು ನಿರ್ವಹಿಸಲು Sri. Puttaswamy Gowda ರವರಿಗೆ ಉಲ್ಲೇಖದನ್ವಯ EE(Project)/Ynk Zone/WO/143/20-21 Date. 24.11.2020 ರಂದು ಕಾಮಗಾರಿ ಆದೇಶವನ್ನು ನೀಡಲಾಗಿರುತ್ತದೆ.

ಉಲ್ಲೇಖ (2)ರ ಮಾನ್ಯ ಮುಖ್ಯ ಆಯುಕ್ತರು, ಬಿಬಿಎಂಪಿ ರವರ ಸುತ್ತೋಲೆಯಂತೆ ದಿನಾಂಕ: 18.07.2022 ರಿಂದ ಅನ್ವಯವಾಗುವಂತೆ ಪಾಲಿಕೆಯು ಪಡೆಯುವ ಸೇವೆಗಳಲ್ಲಿ ಕೆಲವೊಂದು ಸೇವೆಗಳಿಗೆ ಪ್ರಸ್ತುತ ಚಾಲ್ತಿಯಲ್ಲಿರುವ ಜಿ.ಎಸ್.ಟಿ ದರಗಳನ್ನು ಪರಿಷ್ಕರಿಸಲಾಗಿದ್ದು, ಅದರಂತೆ ಕಾರ್ಯಾದೇಶ ನೀಡಿದ್ದು, ಪ್ರಾರಂಭವಾಗದಿರುವ ಕಾಮಗಾರಿಗಳಿಗೆ ಪರಿಷೃತ ಜಿ.ಎಸ್.ಟಿ ದರದಿಂದ ಆಗುವ ವ್ಯತ್ಯಾಸದ ಮೊತ್ತವನ್ನು ಅಳವಡಿಸಿ ಪರಿಷೃತ ಅಂದಾಜು ಪಟ್ಟಿಯನ್ನು ಆಡಳಿತಾತ್ಮಕವಾಗಿ ಅನುಮೋದನೆಯಾದ ಮೊತ್ತದ ಮಿತಿಯೊಳಗೆ ತಯಾರಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಪರಿಷೃತ ಕಾರ್ಯಾದೇಶ ನೀಡುವುದು ಎಂದು ಆದೇಶಿಸಿರುತ್ತಾರೆ. ಹಾಗೂ ಕಾಮಗಾರಿ ಕೈಗೊಂಡಿರುವ ಕೆಲವು ಪ್ರದೇಶಗಳಲ್ಲಿ ಕಾವೇರಿ ಕುಡಿಯುವ ನೀರಿನ ಟೆಸ್ಟಿಂಗ್ ಕಾರ್ಯ ಪೂರ್ಣಗೊಳದೇ ಇರುವುದರಿಂದ ತಾತ್ಕಾಲಿಕವಾಗಿ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿತ್ತು. ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಟೆಸ್ಟಿಂಗ್ ಕಾರ್ಯ ಪೂರ್ಣಗೊಂಡಿರುವುದರಿಂದ ಕಾಮಗಾರಿ ಕೈಗೊಂಡ ಸಮಯದಲ್ಲಿ ಸುಮಾರು 1 ವರ್ಷದ ಹಿಂದೆ ಅಳವಡಿಸಿರುವ ವೆಟ್‌ಮಿಕ್ಸ್ ಹಾಳಾದ ಕಾರಣ ಅಂತಹ ರಸ್ತೆಗಳಿಗೆ ಪುನಃ ಒಂದು ಪದರ ವೆಟ್‌ಮಿಕ್ಸ್ ಅಳವಡಿಸಿ ಸ್ಥಳದ ಅವಶ್ಯಕತೆಗೆ ಅನುಗುಣವಾಗಿ ಕಾಮಗಾರಿಯನ್ನು ನಿರ್ವಹಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಅಂದಾಜು ಪಟ್ಟಿಯಲ್ಲಿ ಅಳವಡಿಸಿರುವ ಜಿ.ಎಸ್.ಟಿ ಮೊತ್ತವನ್ನು ಪರಿಷ್ಕರಿಸಿ ವ್ಯತ್ಯಾಸ ಉಂಟಾಗಿರುವ ಮೊತ್ತಕ್ಕೆ ಸ್ಥಳದ ಅವಶ್ಯಕತೆಗೆ ಅನುಗುಣವಾಗಿ ಕೆಲವು ಅಂಶಗಳು ಹಾಗೂ ಪರಿಮಾಣಗಳಲ್ಲಿ ಬದಲಾವಣೆ ಮಾಡಿಕೊಂಡು ಟೆಂಡರ್ ಅನುಮೋದಿತ ಮೊತ್ತಕ್ಕೆ ಸರಿದೂಗಿಸಿಕೊಂಡು ಮಾರ್ಪಡಿತ ಅಂದಾಜು ಪಟ್ಟಿ ರೂ. 7,97,90,781.85 (Excluding18% GST) ಗಳಿಗೆ ತಯಾರಿಸಲಾಗಿರುತ್ತದೆ. ಹಾಗೂ Comparitive Statement ಗಳನ್ನು ತಯಾರಿಸಲಾಗಿದೆ.

Scanned by TapScanner

ವಿಷಯ :

ಪುಟದ ಸಂಖ್ಯೆ .....

ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ವಿವರ	ಅನುಮೋದಿತ ಟೆಂಡರ್ ಅನ್ವಯ	ಮಾರ್ಪಡಿತ ಅಂದಾಜು ಪಟ್ಟಿಯಂತೆ
1	ಟೆಂಡರ್ ಮೊತ್ತ	12,69,05,290.00	12,61,47,514.00
2	ಜಿ.ಎಸ್.ಟಿ	1,52,28,634.80 (12%)	1,51,37,702 (12%) 8,48,246.00 (6%) On Balance Bill Amount
	ಒಟ್ಟು ಮೊತ್ತ	**14,21,33,924.80**	**14,21,33,462.00**

ಮೇಲ್ಕಂಡಂತೆ ಸದರಿ ಮಾರ್ಪಡಿತ ಅಂದಾಜು ಮೊತ್ತವು ಜಿ.ಎಸ್.ಟಿ ಸೇರಿದಂತೆ ಅನುಮೋದಿತ ಟೆಂಡರ್ ಮೊತ್ತಕ್ಕಿಂತ ಕಡಿಮೆ ಇದ್ದು ಇದರಿಂದ ಪಾಲಿಕೆಗೆ ಯಾವುದೇ ಆರ್ಥಿಕ ಹೊರೆಯಾಗದಂತೆ ಮಾರ್ಪಡಿತ ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ. ಆದುದರಿಂದ ಸದರಿ ಕಾಮಗಾರಿಯ ಮಾರ್ಪಡಿತ ಅಂದಾಜು ಪಟ್ಟಿ, Comparitive Statement, Work Slip ಗಳಿಗೆ ಅನುಮೋದನೆ ನೀಡುವ ಸಂಬಂಧ ತಮ್ಮ ಮುಂದಿನ ಆದೇಶ ಕೋರಿ ಕಡತವನ್ನು ಮಂಡಿಸಿದೆ.

ಸ.ಅ

ಸಹಾಯಕ ಕಾರ್ಯಪಾಲಕ ಅಭಿಯಂತರರು
ಯೋಜನಾ ವಿಭಾಗ, ಯಲಹಂಕ ವಲಯ

Asst. Executive Engineer
Project Division
Yelahanka Zone
BBMP, Bangalore - 92

ಕಾರ್ಯಪಾಲಕ ಅಭಿಯಂತರರು (ಯೋ.ವಿ)

ಕಂಡಿಕೆ (1) ರಂತೆ (3) ರಲ್ಲಿ ಪರಿಶೀಲನೆ ಮಾಡಿದಂತೆ ಸದರಿ ನಿಮಾಣದಲ್ಲಿ ಉಪಯೋಗಿಸುವ ಸಿಮೆಂಟ್ ರಸ್ತೆಗಳಲ್ಲಿ ಹೊಂದಿ ತೀವ್ರಾಯಾಸಕ್ಕೆ ಬರಲು Macadam ಮತ್ತು BM ಗಳಿಗೆಸಲ್ಲಿ ಬಳಿಕೆ ಮಾಡುವಂತೆ ಹಾಗೂ ಹೆಚ್ಚುವರಿ 6% GST ಮೊತ್ತವನ್ನು ಗುತ್ತಿಗೆದಾರರಿಗೆ ಪಾವತಿಸಲು ಅನುಕೂಲವಾಗುವಂತೆ ಅಂದಾಜು ಪಟ್ಟಿಯಲ್ಲಿ ಪ್ರತ್ಯೇಕವಾಗಿ ಅಳವಡಿಸಲು ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಲಾಗಿದೆ.

ಸದರಿ ಕಾಮಗಾರಿಯ ಮಾರ್ಪಡಿತ ಅಂದಾಜು ಪಟ್ಟಿಯಲ್ಲಿನ ಒಟ್ಟು ಮೊತ್ತ ರೂ 41,09,040/- ಗಳಿಗೆ ಶೇ 3.24% ರಷ್ಟು ಕಡಿಮೆ ದರಕ್ಕೆ ಗುತ್ತಿಗೆದಾರರು ಒಪ್ಪಿಕೊಂಡಿರುತ್ತಾರೆ. ಅದರಂತೆ ಮಾರ್ಪಡಿತ ಅಂದಾಜು ಪಟ್ಟಿಯಲ್ಲಿನ ಒಟ್ಟು ಮೊತ್ತ ರೂ 14,21,33,462/- ಗಳಿಗೆ ಪ್ರಸ್ತುತ ಕಾಮಗಾರಿಯ ಕಡತದಲ್ಲಿ ಲಗತ್ತಿಸಿರುವ Work Slip ಗೆ ಪ್ರಸ್ತುತದಲ್ಲಿ ಅನುಮೋದನೆ ನೀಡಲು ಕೋರಿದೆ.

ಮುಖ್ಯ ಎಂಜಿನಿಯರರವರು (ಯೋ.ವಿ)

Scanned by TapScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ .....

ಪುಟದ ಸಂಖ್ಯೆ .....

ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಾರ್ಯಪಾಲಕ ಅಭಿಯಂತರರು ಯೋಜನೆ ವಿಭಾಗರವರು ತಿಳಿಸಿರುವಂತೆ, Restoration to roads and drains at Dasarahalli saraipalya and Rachenahalli surrounding areas in ward no-06 ನಿರ್ವಹಿಸಲು ಗುತ್ತಿಗೆದಾರರಾದ **Sri.Puttaswamy Gowda** ರವರಿಗೆ ಕಾರ್ಯಾದೇಶವನ್ನು ನೀಡಲಾಗಿದ್ದು, ಜಿಎಸ್‌ಟಿ ದರದಿಂದ ಆಗುವ ವ್ಯತ್ಯಾಸದ ಮೊತ್ತವನ್ನು ಅಳವಡಿಸಿ ಪರಿಷ್ಕೃತ ಅಂದಾಜು ಪಟ್ಟಿಯನ್ನು ಆಳಿತಾತ್ಮಕವಾಗಿ ಅನುಮೋದನೆಯಾದ ಮಿತಿಯೋಳಗೆ ತಯಾರಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಪರಿಷ್ಕೃತ ಕಾರ್ಯಾದೇಶ ನೀಡಲು ಆದೇಶಿಸಲಾಗಿರುತ್ತದೆ.

ಅದರಂತೆ ಕಾಮಗಾರಿಯ ಅಂದಾಜುಪಟ್ಟಿಯಲ್ಲಿ ಅಳವಡಿಸಿರುವ ಜಿಎಸ್‌ಟಿ ಮೊತ್ತವನ್ನು ಪರಿಷ್ಕೃಸಿ ವ್ಯತ್ಯಾಸ ಉಂಟಾಗಿರುವ ಮೊತ್ತಕ್ಕೆ ಪರಿಮಾಣಗಳಲ್ಲಿ ಬದಲಾವಣೆ ಮಾಡಿಕೊಂಡು ಹಾಗೂ ಸ್ಥಳದ ಅವಶ್ಯಕತೆಗೆ ಅನುಗುಣವಾಗಿ ಟೆಂಡರ್ ಅನುಮೋದಿತ ಮೊತ್ತಕ್ಕೆ ಸರಿದೂಗಿಸಿಕೊಂಡು ಮಾರ್ಪಾಡು ಅಂದಾಜು ಪಟ್ಟಿಯನ್ನು ಈ ಕೆಳಕಂಡಂತೆ ತಯಾರಿಸಿ ಅನುಮೋದನೆಗಾಗಿ ಕಾರ್ಯಪಾಲಕ ಅಭಿಯಂತರರು ಯೋಜನೆ ವಿಭಾಗರವರು ಸಲ್ಲಿಸಿದ್ದು ವಿವರಗಳು ಈ ಕೆಳಕಂಡತೆ ಇರುತ್ತವೆ.

1. ಕಾಮಗಾರಿಯ ಅಂದಾಜು ಮೊತ್ತ ರೂ.**1500.00**ಲಕ್ಷಗಳು
2. ಮಾರ್ಪಾಡು ಅಂದಾಜು ಮೊತ್ತ ರೂ.**14,21,33,462.00**ಗಳು **(Including GST)**
3. ವರ್ಕ್ಸ್‌ಸ್ಲಿಪ್ ಮೊತ್ತ ರೂ.**41,09,040.00(3.24%)**ಗಳು

ಮೇಲ್ಕಂಡ ಮೊತ್ತವನ್ನು ಟೆಂಡರ್ ಕಾಮಗಾರಿಯ ಉಳಿತಾಯ ಮೊತ್ತದಲ್ಲಿ ಭರಿಸಲು, ವರ್ಕ್ಸ್‌ಸ್ಲಿಪ್, ಮತ್ತು ಮಾರ್ಪಾಡು ಅಂದಾಜುಪಟ್ಟಿಗೆ ಕಾರ್ಯಪಾಲಕ ಅಭಿಯಂತರರು (ಯೋಜನೆ ವಿಭಾಗ)ರವರು ಅನುಮೋದನೆ ಕೋರಿದ್ದು, ಮುಂದಿನ ಆದೇಶಕ್ಕೆ ಸಲ್ಲಿಸಿದೆ.

ಮುಖ್ಯ ಅಭಿಯಂತರರು (ಯ.ವ)

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned by TapScanner